ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 120/2016

(ಪ್ರಾಸಾ-3 ಚಾಸಾ-8 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 20.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಚಂದ್ರು |
| ತಂದೆಯ ಹೆಸರು | - | ನಾರಾಯಣಪ್ಪ |
| ವಯಸ್ಸು | - | 36 ವರ್ಷ, |
| ಉದ್ಯೋಗ | - | ವ್ಯಾಪಾರ |
| ವಾಸ | - | ಕೋಡಪ್ಪನಹಳ್ಳಿ, ನೆಲಮಂಗಲ ತಾಃ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಪ್ರಾಸಾ-1 ಇವರ ಪರಿಚಯ ಇದೆ. ಆಕೆ ಪರಿಶಿಷ್ಟ ಜಾತಿಯ ಬೋವಿ ಜಾತಿಯವರು. ಅವರ ಜಮೀನು ಮಂಟನಕುರ್ಚಿಯಲ್ಲಿದೆ. ಆ ಜಮೀನಿನಲ್ಲಿ ಬೋರ್ ವೆಲ್ ಹಾಕಿ ಒಂದು ಶೆಡ್ ಕಟ್ಟಿದ್ದಾರೆ. ಜಮೀನು ನೋಡಿಕೊಳ್ಳಲು ಪ್ರಾಸಾ-2 ಇವರನ್ನು ನೇಮಿಸಿಕೊಂಡಿದ್ದರು. ಮನೆ ಕಟ್ಟಲು ಪಾಯ ಹಾಕಿದ್ದರು. ಹುರಳಿ ಗಿಡಗಳನ್ನು ಬೆಳೆಸಿದ್ದರು. ನ್ಯಾಯಾಲಯದ ಮುಂದೆ ಇರುವ 1 ಮತ್ತು 3 ನೇ ಆರೋಪಿತರನ್ನು ಅವರು ಪ್ರಾಸಾ-1 ಇವರ ಜಮೀನಿನ ಹತ್ತಿರ 7-8 ವರ್ಷಗಳ ಹಿಂದೆ ಸ್ಕಾರ್ಪಿಯೋ ಮತ್ತು ಹ್ಯುಂಡಯಿ ಕಾರಿನಲ್ಲಿ ಬಂದಾಗ ನೋಡಿದ್ದೇನೆ. ಅವರು ಒಟ್ಟು 7-8 ಜನ ಬಂದಿದ್ದರು. ಈಗ ಹೆಸರು ಓದಿ ಹೇಳಿರುವ 2, 4 ರಿಂದ 12 ನೇ ಗೈರು ಹಾಜರಾದ ಆರೋಪಿತರು ಮತ್ತು ಮೃತವಾಗಿರುವ 13 ನೇ ಆರೋಪಿ ಇವರ ಪರಿಚಯ ಇದೆಯೇ ಎಂದರೆ ಸಾಕ್ಷಿದಾರರು ಅವರ ಹೆಸರುಗಳು ಗೊತ್ತಿಲ್ಲ, ಆದರೆ ಮುಖ ನೋಡಿ ಗುರ್ತಿಸುತ್ತೇನೆ ಎನ್ನುತ್ತಾರೆ (2, 4 ರಿಂದ 12 ನೇ ಆರೋಪಿತರು ಗೈರು ಹಾಜರಿದ್ದು ಅವರ ಐಡೆಂಟಿಟಿಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. 13 ನೇ ಆರೋಪಿ ಮೃತ ಹೊಂದಿರುತ್ತಾರೆ).

2. ಈಗ ಸುಮಾರು 7-8 ವರ್ಷಗಳ ಹಿಂದೆ ಬೆಳಗಿನ ಜಾವ ಫ್ರಾಸಾ-2 ರವರು ನನಗೆ ಫೋನ್ ಮಾಡಿ ತಿಳಿಸಿದಾಗ ನಾನು ಫ್ರಾಸಾ-1 ಇವರ ಜಮೀನಿನ ಹತ್ತಿರ ಸುಮಾರು 7.30 ಘಂಟೆಗೆ ಹೋದೆ. ಆಗ ಆರೋಪಿತರೆಲ್ಲಾ ಅಲ್ಲಿ ಇದ್ದರು. ನಾನು ಹೋದ ಕೂಡಲೇ ಫ್ರಾಸಾ-1 ರವರು ಸಹ ಆ ಜಮೀನಿನ ಹತ್ತಿರ ಬಂದರು. ಆರೋಪಿತರು ಟ್ರಾಕ್ಟರ್ ನಿಂದ ಜಮೀನಿನಲ್ಲಿನ ಹುರುಳಿ ಮತ್ತು ಸೌತೆ ಬೆಳೆಯಲ್ಲಿ ಉಳುಮೆ ಮಾಡುತ್ತಿದ್ದರು. ಜೆಸಿಬಿಯಿಂದ ಶೆಡ್ ಅನ್ನು ಒಡೆದು ಹಾಕುತ್ತಿದ್ದರು. ಬೇಲಿ ಹಾಕಿದ್ದ ಕೂಚಗಳನ್ನು ಮತ್ತು ತಂತಿಯನ್ನು ಕೆಡವಿ ಹಾಕಿದರು. ಫ್ರಾಸಾ-1 ಇವರು ಅವರನ್ನು ತರಾಟೆಗೆ ತಗೆದುಕೊಂಡರು, ಯಾಕೆ ಈ ರೀತಿ ಹಾಳು ಮಾಡುತ್ತಿದ್ದೀರಾ ಎಂದು ಅವರಿಗೆ ಕೇಳಿದರು. ಆಗ ಆರೋಪಿತರು ಆಕೆಗೆ ನೀವು ವಡ್ಡ ಜಾತಿಗೆ ಸೇರಿದವರು, ಹಾಗೆ ಹೀಗೆ ಎಂದು ಬೈದು ಆಕೆಯನ್ನು ಆಚೆಗೆ ದಬ್ಬಿದರು. ಘಟನೆಯನ್ನು ನಾನು, ಫ್ರಾಸಾ-2, ಚಾಸಾ-7 ನೋಡಿದ್ದೇವೆ. ಜಮೀನು ಪಕ್ಕದಲ್ಲಿ ಒಂದು ಮನೆ ಇದೆ. ಆ ಮನೆಯವರು ಸಹ ಗಲಾಟೆ ನೋಡಿದ್ದಾರೆ. ಆರೋಪಿತರು ಅಂದಾಜು 6-7 ಲಕ್ಷ ರೂಪಾಯಿಯಷ್ಟು ನಷ್ಟವನ್ನು ಫ್ರಾಸಾ-1 ಇವರಿಗೆ ಮಾಡಿದ್ದಾರೆ. ಈಗ ತೋರಿಸಿದ ಮು.ಮಾ-1 ರಿಂದ 4 ಇವು ಆರೋಪಿತರು ನಷ್ಟ ಮಾಡಿದ ವಸ್ತುಗಳ ತುಂಡು ಇವೆ. ಈಗ ತೋರಿಸಿದ ನಿಪಿ-4 ರಿಂದ 7 ಫೋಟೋಗಳಲ್ಲಿರುವ ಕಾರಿನಲ್ಲಿ ಆರೋಪಿತರು ಬಂದಿದ್ದರು. ನಿಪಿ-8 ರಿಂದ 10 ಇವುಗಳಲ್ಲಿರುವ ಕಲ್ಟಿವೇಟರ್ ಅನ್ನೇ ಟ್ರಾಕ್ಟರ್ ಗೆ ಜೋಡಿಸಿ ಉಳುಮೆ ಮಾಡುತ್ತಿದ್ದರು. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ವಕೀಲರು ಮಧ್ಯಾಹ್ನ ಪಾಟೀ ಸವಾಲು ಮಾಡುವುದಾಗಿ ತಿಳಿಸಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ** (ಆರೋಪಿ ಪರ ವಕೀಲರು ಫ್ರಾಸಾ-1 ಇವರ ಪಾಟೀ ಸವಾಲು ಮಾಡಲು ಪುನಃ ಕರೆಸುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆ ಸಾಕ್ಷಿಯ ಪಾಟೀ ಸವಾಲಿನ ನಂತರ ಈ ದಿನ ವಿಚಾರಣೆಯಾದ ಸಾಕ್ಷಿಗಳ ಪಾಟೀ ಸವಾಲು ಮಾಡುವುದಾಗಿ ತಿಳಿಸುತ್ತಾರೆ. ಆದ್ದರಿಂದ ಈ ಸಾಕ್ಷಿಯ ಪಾಟೀ ಸವಾಲಿಗೆ ಸವಯ ಕೋರುತ್ತಾರೆ. ಸಾಕ್ಷಿಯ ಪಾಟೀ ಸವಾಲು ಮುಂದುಊಡಲು ಅದು ಸಕಾರಣ ಇರುವುದಿಲ್ಲ. ಆದರೆ ನ್ಯಾಯಾಲಯದ ಸಮಯ ಸಂಜೆ 04.30 ಆಗಿದ್ದು ಹಳೆಯ ಪ್ರಕರಣಗಳ ವಿಚಾರಣೆ ಇರುವುದರಿಂದ ಅವರ ಮನವಿಯನ್ನು ಪರಿಗಣಿಸಿ ರೂ.500/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು